ಎಂದೂ ತಿಳಿದಿರಲಿಕ್ಕಿಲ್ಲ. ನೋವುಂಟು ಮಾಡುವ ಇಂತಹ ಮಾತುಗಳನ್ನು ಆಡಬಾರದು ಎಂದೂ ಅವರಿಗೆ ಗೊತ್ತಿಲ್ಲ. ನೀನು ಇದರಿಂದ ನೊಂದು, ಕೋಪಗೊಳ್ಳುವ ಬದಲು ಆ ಎಲ್ಲ ಸಹಪಾಠಿಗಳನ್ನು ನಿನ್ನ ಗೆಳೆಯರನ್ನಾಗಿ ಮಾಡಿಕೋ. ಅವರೆಲ್ಲರ ಸ್ನೇಹ ನಿನಗೆ ಮುಂದೆ ಹೋಗಲು ಸಹಾಯಕವಾಗುತ್ತದೆ. ನನ್ನ ಮುದ್ದು ಬಂಗಾರ ನೀನು. ಇನ್ಯಾರೇ ಚುಡಾಯಿಸಲಿ, ಜಗಳ ಕಾಯಲು ಹೋಗಬೇಡ. ಗುದ್ದಾಡಬೇಡ. ಹೀಗೆ ಅಳುತ್ತಾ ಕೂರುವುದು ಹೇಡಿಗಳ ಕೆಲಸ. ನೀನು ನನ್ನ ಬಹಾದ್ದೂರ್ ಮಗು' ಎಂದು ಹುರಿದುಂಬಿಸಿದರು.

ಅಮ್ಮ ಹಣೆ, ತಲೆಯ ಮೇಲೆ ಕೈಯಾಡಿಸುತ್ತಾ ಸಂತೈಸುತ್ತಿದ್ದಂತೆ, ಅಮ್ಮನ ಬೆಚ್ಚನೆಯ ಮಡಿಲಲ್ಲಿ ಭಾವೇಶ್‌ಗೆ ಯಾವಾಗ ನಿದ್ದೆ ಬಂದಿತು ತಿಳಿಯಲಿಲ್ಲ. ದೃಷ್ಟಿಹೀನ ಬಾಲಕನ ಬಾಲ್ಯ ಸರಳವಿರಲಿಲ್ಲ. ಹೊರ ಜಗತ್ತಿನ ಹೋರಾಟದಲ್ಲಿ ದಣಿದಾಗಲೆಲ್ಲ, ಭಾವೇಶ್ ಓಡುತ್ತಿದ್ದುದು ಈ ತಾಯಿಯ ಪ್ರೀತಿಯ ಮಡಿಲಿಗೆ. ಅಮ್ಮ ಹೇಳಿದ್ದಳು, 'ನನಗೆ ಪೂರ್ಣ ವಿಶ್ವಾಸವಿದೆ ಮಗನೆ, ಮುಂದೊಂದು ದಿನ ನಾನು ನಿನ್ನ ಅಮ್ಮ ಎಂದು ಗರ್ವದಿಂದ ಅಭಿಮಾನದಿಂದ ಹೇಳಿಕೊಳ್ಳುವ ಸಮಯ ಬರುತ್ತದೆ'.

ಅಂತಹ ಕಾಲವೂ ಬರಲಿತ್ತು. ಆದರೆ ನಡುವೆ ನಿಂತಿತ್ತು ಬದುಕಿನ ಅಗಾಧ ಹೋರಾಟ.

* * *

ಭಾವೇಶ್ ಬಾಂಬೆಯ ಘಾಟ್ಕೊಪ್ಪರ್‌ನಲ್ಲಿ ದಿನಾಂಕ 29 ಡಿಸೆಂಬರ್ 1970ರಂದು ಹುಟ್ಟಿದರು. ಅವರ ಅಜ್ಜಿಯ ಮನೆ ಅಲ್ಲಿತ್ತು. ಭಾವೇಶ್ ಅವರಿಗೆ ಮೂರು ವರ್ಷಗಳಿಗೆ ದೊಡ್ಡವನಾದ ಅಣ್ಣನಿದ್ದ. ಆತನ ಹೆಸರು ಜತಿನ್. ಭಾವೇಶ್ ಹುಟ್ಟಿದಾಗ ಮಗುವಿಗೆ ಕಣ್ಣು ಕಾಣಿಸುವುದೋ ಇಲ್ಲವೋ ತಟ್ಟನೆ ತಿಳಿಯದಿದ್ದರೂ, ಅತ್ತ ಇತ್ತ ಹೊರಳಿದ ಮಗುವಿಗೆ ಏನೋ ಕಾಣುತ್ತಿದೆ ಎಂಬ ಭ್ರಮೆ ಇತ್ತು. ಬೆಳೆದಂತೆ ಅರಿವಾಗಿತ್ತು ಕಣ್ಣಿನ ತೊಂದರೆ.

ಭಾವೇಶ್ ಹುಟ್ಟಿದ್ದು ಗುಜರಾತಿ ಪರಿವಾರದಲ್ಲಿ. ತಂದೆ ಚಂದೂಬಾಯಿ ಭಾಟಿಯಾ ಮತ್ತು ತಾಯಿ ಹಸುಮತಿ ಬೆನ್. ಕಚ್ ಪ್ರದೇಶದ ಅಂಜಾರ್ ಎಂಬ ಸಣ್ಣ ಹಳ್ಳಿಯಿಂದ ಅವರ ತಂದೆ ಬಂದಿದ್ದರು. ಭಾವೇಶ್ ಅವರ ದಾದಾಜಿ (ತಂದೆಯ ತಂದೆ) ಜಯರಾಮ್ದಾಸ್ ಭಾಟಿಯಾ ಮತ್ತು ದಾದೀಜಿ ಪಾರ್ವತಿ ಮಾ. ದಾದಾಜಿ ಕಚ್ ಪ್ರದೇಶದ ರಾಜಾ ಚರಣ್‌ಸಿಂಗ್ ಅವರ 'ಜೀನಿಂಗ್ ಪ್ರೆಸ್'ನಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದರು. ಆ ಸಮಯದಲ್ಲಿ ಅವರಿಗೆ ಸಾಕಷ್ಟು ಒಳ್ಳೆಯ ಸಂಬಳ ಸಿಗುತ್ತಿತ್ತು. ಇದು ಸುಮಾರು 1940ರ ಮಾತು. ಅಲ್ಲಿ ಕೆಲವು ಸಮಯ ಕೆಲಸ ಮಾಡಿದ ಮೇಲೆ ಅಲ್ಲಿಯ ದಿವಾನರ ಜೊತೆ ದಾದಾಜಿ ಅವರಿಗೆ ಸ್ವಲ್ಪ ಮನಸ್ತಾಪವಾಯಿತು.

ಹಾಗೆಂದೇ ಜೀನಿಂಗ್ ಪ್ರೆಸ್ ಕೆಲಸವನ್ನು ಬಿಟ್ಟು ಬಿಟ್ಟರು. ಅಲ್ಲಿಂದ ಮುಂದೆ ಎಷ್ಟೇ ಪ್ರಯತ್ನಿಸಿದರೂ ಅವರಿಗೆ ಸರಿಯಾದ ಕೆಲಸ ಸಿಗಲಿಲ್ಲ. ಸ್ಥಿತಿವಂತ ಕುಟುಂಬ ಬಡತನದ ಅಂಚಿಗೆ ಬಂದು ನಿಂತಿತ್ತು. ಇಂತಹ ಕಷ್ಟದ ಸಮಯವೂ ಆಗಮಿಸಿತು. ಜೀವನ ನಿರ್ವಹಣೆಗೆ ಒಂದು ಚಹಾದ ಕೈಗಾಡಿ ಹಾಕಿಕೊಂಡು ಬದುಕಬೇಕಾಯಿತು. ಈ ದಾದಾಜಿ ಅವರ ಚಿಕ್ಕಪ್ಪನ ಮಗಳಿಗೆ ಮಹಾರಾಷ್ಟ್ರದ ಗೋಂದಿಯಾದಲ್ಲಿಯ ಚತುರ್ಭುಜ ಜಸಾನೀಜೀ ಅವರೊಂದಿಗೆ ವಿವಾಹವಾಗಿತ್ತು. ಚತುರ್ಭುಜ ಅವರು ಕಟ್ಟಾ ಗಾಂಧೀವಾದಿ. ಆ ದಿನಗಳಲ್ಲಿ ಅವರದೊಂದು ರೈಸ್ ಮಿಲ್ ಮಧ್ಯಪ್ರದೇಶದ ರಾಜನಾಂದಾ ಗಾಂವ್‌ನ ಬಾಂದಾ ಎಂಬಲ್ಲಿ ಇತ್ತು.

ಚತುರ್ಭುಜ ಅವರಿಗೆ ಜಯರಾಮ್ ದಾಸ್ ಅವರ ಪರಿಸ್ಥಿತಿ ತಿಳಿದು, ಅವರನ್ನು ತಮ್ಮ ರೈಸ್ ಮಿಲ್‌ನಲ್ಲಿ ಕೆಲಸ ಮಾಡಲು ಕರೆದರು. ಭಾವೇಶ್ ಅವರ ತಂದೆ ಚಂದೂಬಾಯಿ ಭಾಟಿಯಾ ಅಂಜಾರ್ ಗಾವ್‌ನಲ್ಲಿ 12ನೇ ತರಗತಿಯವರೆಗೆ ಓದಿದ್ದರು. ಅವರೂ ಈಗ ತಂದೆಯೊಡನೆ ರೈಸ್ ಮಿಲ್‌ನಲ್ಲಿ ಕೆಲಸ ಮಾಡಲು ಆರಂಭಿಸಿದರು. ಅವರ ವಿವಾಹ ಹಸುಮತಿ ಬೆನ್ ಜೊತೆಗೆ ನೆರವೇರಿತು.

ವಿವಾಹವಾದ ಕೆಲವು ವರ್ಷಗಳು ಬಾಂದಾದಲ್ಲಿಯೇ ಇದ್ದರು. ಯಾವ ಕಾರಣಕ್ಕೆ ತಿಳಿದಿಲ್ಲ, ಚತುರ್ಭುಜ್ 'ರೈಸ್ ಮಿಲ್' ಮಾರಲು ನಿರ್ಧರಿಸಿದರು. ಮತ್ತೆ ಕೆಲಸ ಕಳೆದುಕೊಳ್ಳಲಿದ್ದ ಭಾವೇಶ್ ಅವರ ದಾದಾಜಿಯನ್ನು ತಾವು ಕೆಲಸ ಮಾಡುತ್ತಿದ್ದ 'ಮಾತಾಟೋಲೀ ಸಿಮೆಂಟ್ ವರ್ಕ್ಸ್' ಕಂಪನಿಯಲ್ಲಿ ಕೆಲಸ ಮಾಡಲು ಆಹ್ವಾನಿಸಿದರು. ಭಾವೇಶ್ ಅವರು ಹುಟ್ಟುವ ಕೆಲವು ತಿಂಗಳುಗಳ ಮೊದಲೇ ಅವರ ಪೂರ್ಣ ಪರಿವಾರ ನಾಗಪುರದ ವಿಭಾಗದಲ್ಲಿರುವ ಗೋಂದಿಯಾದಲ್ಲಿ ನೆಲೆಸಿತ್ತು. ಆಗ ಗೋಂದಿಯಾ ಒಂದು ತಾಲೂಕಾಗಿತ್ತು. ತಂದೆ ಗೋಂದಿಯಾಗೆ ಬಂದ ಮೇಲೆ, 'ಮಾತಾಟೋಲೀ ಸಿಮೆಂಟ್ ವರ್ಕ್ಸ್' ಕಂಪನಿಯಲ್ಲಿ ಅಕೌಂಟೆಂಟ್ ಆಗಿ ಕೆಲಸ ಮಾಡತೊಡಗಿದ್ದರು.

ಭಾವೇಶ್ ಮತ್ತು ಅವರ ಅಣ್ಣ ಜತಿನ್ ಇಬ್ಬರ ಜನ್ಮವೂ ಬಾಂಬೆಯ ಅಜ್ಜಿಯ ಮನೆಯಲ್ಲಿಯೇ ಆದದ್ದು. ಈ ಅಜ್ಜಿಯ ಮನೆ ಘಾಟ್ಕೊಪ್ಪರದ ತಿಲಕ್ ರಸ್ತೆಯ ಜೋಶಿ ಲೇನ್ ಎಂಬ ಗಲ್ಲಿಯಲ್ಲಿದ್ದ 'ಭಾಟಿಯಾ ಭವನ್'. ಆ ಮನೆಯಲ್ಲಿ ಅವರ ಕೂಡು ಕುಟುಂಬದ ಸುಮಾರು 55ರಿಂದ 60 ಜನರು ವಾಸಿಸುತ್ತಿದ್ದ ಸಮಯವದು. ಅಜ್ಜ ಲಾಲ್ಜೀ ಆಸರ್, ಶೇರ್ ಬಜಾರ್‌ನಲ್ಲಿ ಕೆಲಸ ಮಾಡುತ್ತಿದ್ದರು. ಅಜ್ಜಿಯ ಮನೆ ಭಾವೇಶ್ ಅವರಿಗೆ ತುಂಬಾ ಪ್ರಿಯವಾದ ತಾಣವಾಗಿತ್ತು. ರಜೆ ಬಂದಿತು ಎಂದರೆ ಅಮ್ಮನೊಡನೆ ಬಾಂಬೆಗೆ ಬರುತ್ತಿದ್ದರು. ಅಲ್ಲಿದ್ದ ಅಷ್ಟೆಲ್ಲ ಮಾಮಾಗಳು ಮಾಮೀಗಳು, ಅವರ ಮಕ್ಕಳು ಎಲ್ಲರೊಡನೆ ಬಲವಾದ ಸಂಬಂಧದ ಬೆಸುಗೆ. ಕಣ್ಣು ಕಾಣದ ಹುಡುಗನನ್ನು ಉಳಿದ ಮಕ್ಕಳು ಕೀಟಲೆ ಮಾಡಿ ರೇಗಿಸುವರು. ಅವರೊಡನೆ ಸಾಕಷ್ಟು ಜಗಳ ಆಗುತ್ತಿತ್ತು. ಮಕ್ಕಳಿಗೆ ಈತನ ಕಷ್ಟ ಅರಿವಾಗುತ್ತಿರಲಿಲ್ಲ. ಆದರೆ ಹಿರಿಯರು ಬಹಳಷ್ಟು ಸಹನೆಯಿಂದ, ಸಹಾನುಭೂತಿಯಿಂದ ಭಾವೇಶ್ ಜೊತೆಯಲ್ಲಿ ವ್ಯವಹರಿಸುತ್ತಿದ್ದರು.

ಭಾವೇಶ್ 'ರೆಟಿನಾ ಮ್ಯಾಕ್ಯುಲರ್ ಡಿಜನರೇಶನ್' ತೊಂದರೆಯ ಜೊತೆಗೇ ಹುಟ್ಟಿದ್ದರು. ಅದರೊಡನೆ ಅವರ ಕಣ್ಣಿನ ಆಪ್ಟಿಕಲ್ ನರಗಳು ದುರ್ಬಲವಿದ್ದು ಮುದುಡುತ್ತಿದ್ದವು. ಚಿಕ್ಕ ಪ್ರಾಯದಲ್ಲಿಯೇ ಅವರು ಸಂಪೂರ್ಣ ಕುರುಡರಾಗಲಿದ್ದರು. ಈಗ ಕೂಡಾ ಅವರಿಗೆ ಕಾಣುತ್ತಿದ್ದದ್ದು ಒಂದಿಷ್ಟು ಬೆಳಕಿನ ಮಬ್ಬು ಚಿತ್ರ ಮಾತ್ರ. ಅವರ ದೃಷ್ಟಿಹೀನತೆ ಆನುವಂಶಿಕವಾಗಿತ್ತು. ಅವರ ತಾಯಿಯ ಕುಟುಂಬದ ಕಡೆ, ಅನೇಕರಿಗೆ ಕಣ್ಣಿನ ತೊಂದರೆ ಕಾಡಿತ್ತು. ಅವರ ತಾಯಿಯ ಕಣ್ಣಿನ ದೃಷ್ಟಿಯೂ ಕ್ಷೀಣವಿತ್ತು, ಅಜ್ಜನ ದೃಷ್ಟಿ ಕೂಡಾ. ಆದರೆ ಅದು ಭಾವೇಶ್ ಅವರಂತೆ ಸಂಪೂರ್ಣ ಕುರುಡುತನಕ್ಕೆ ಹೋಗಿರಲಿಲ್ಲ. ಅಮ್ಮನ ಅಣ್ಣ ಮಾತ್ರ ಪೂರ್ಣ ಅಂಧರಾಗಿದ್ದರು. ಅಮ್ಮನ ಸೋದರಿಯ ಕುಟುಂಬದಲ್ಲಿಯೂ ಪೂರ್ಣ ಕುರುಡಿನ ಮಗು ಹುಟ್ಟಿತ್ತು. ತಾಯಿಯ ಕಡೆಯ ಕುಟುಂಬದ ವಂಶವಾಹಿನಿಯಲ್ಲಿ ಇದ್ದ ದೋಷವಿದು. ಅದು ಎಲ್ಲರಿಗೂ ಬಡಿಯದಿದ್ದರೂ, ಪ್ರತಿ ಪೀಳಿಗೆಯಲ್ಲಿ ಅಲ್ಲೊಬ್ಬರು, ಇಲ್ಲೊಬ್ಬರಲ್ಲಿ ಈ ವಂಶವಾಹಿ ಜಾಗೃತವಾಗಿ ಕುರುಡುತನಕ್ಕೆ ಕಾರಣವಾಗಿತ್ತು. ತಮ್ಮ ಅಣ್ಣ ದೃಷ್ಟಿಹೀನತೆಯ ಕಷ್ಟಗಳ ಮೂಲಕ ಹಾಯುವುದನ್ನು ಅಮ್ಮ ಕಂಡಿದ್ದಳು. ಈ ಕಷ್ಟದ ಹಾದಿಗೆ ಮಗನನ್ನು ಆರಂಭದಿಂದಲೇ ಗಟ್ಟಿ ಮಾಡುವ ಪ್ರಯತ್ನ ಅಮ್ಮನದು.

ಭಾವೇಶ್ ಅವರ ಕಣ್ಣುಗಳ ತೊಂದರೆ ತೀವ್ರವಾಗಿದ್ದರೂ, ಅಮ್ಮನ ಪ್ರೋತ್ಸಾಹದಲ್ಲಿ ಬಲು ಚಟುವಟಿಕೆಯ ಮಗುವಾಗಿ ಬೆಳೆದರು. ಆ ದಿನಗಳಲ್ಲಿ ಹೌರಾ–ಬಾಂಬೆ ರೈಲು ಗೋಂದಿಯಾ ಮೂಲಕ ಹಾದು ಹೋಗುತ್ತಿತ್ತು. ರೈಲು ಪ್ರಯಾಣ ಎಂದರೆ ಭಾವೇಶ್‌ಗೆ ಬಲು ಖುಷಿ. ಉದ್ದಕ್ಕೂ ಕಾಣುವ ದೃಶ್ಯಗಳನ್ನು ಅಮ್ಮ ವಿವರವಾಗಿ ವರ್ಣಿಸಿ ಹೇಳುವರು. ಹಳಿಗಳ ಮೇಲೆ ಚಕ್ಕಬುಕ್ಕ ನಡೆದ ರೈಲಿನ ಶಬ್ದ, ನಿಲ್ದಾಣಗಳು ಬಂದಾಗ ಪ್ಲಾಟ್‌ಫಾರಂ ತುಂಬಾ ನೂರೆಂಟು ಸಂಭ್ರಮದ ಸದ್ದುಗಳು. ಕಿಟಕಿಯಿಂದ ಹಾಯ್ದು ಬಂದ ತಂಗಾಳಿ. ಅದು ಬೇರೆಯೇ ಲೋಕವಾಗಿತ್ತು. ನಿಜ, ದೃಷ್ಟಿಹೀನ ಬಾಲಕನ ಬಾಲ್ಯದಲ್ಲಿ ಬಹಳಷ್ಟು ಸವಾಲುಗಳಿದ್ದವು. ಆದರೆ ಅವರ ಸ್ವಾಭಿಮಾನದ ಒಳಗಿನ ಕಣ್ಣುಗಳನ್ನು ತೆರೆಸಿದವರು, ಅವರ ಅಮ್ಮ. ಅಮ್ಮ ಅವರ ಅತ್ಯಂತ ಆಪ್ತ ಸ್ನೇಹಿತೆಯಾಗಿದ್ದಳು. ಕುರುಡು ಮಗನ ಕತ್ತಲ ಜಗತ್ತಿನಿಂದ ದೀವಟಿಗೆ ಹಿಡಿದು ನಿಂತಿದ್ದಳು.

* * *

ಭಾವೇಶ್ ಅವರ ಬಾಲ್ಯದ ಬದುಕು ಬಡತನದ ಬಿಗಿಮುಷ್ಟಿಯಲ್ಲಿತ್ತು. ಅನ್ನಕ್ಕೆ ಇಡುವಾಗ ಹೆಚ್ಚು ನೀರು ಹಾಕಿ, ಅನ್ನ ಬಸಿದು ಬಂದ ಗಂಜಿಯನ್ನೇ ಕಡಿಯಾಗಿ, ನೀರುಹುಳಿಯಾಗಿ ಬಳಸುತ್ತಿದ್ದ ಕಾಲ. ಭಾವೇಶ್ ಅವರ ಅತಿ ಹಳೆಯ ಬಾಲ್ಯದ ನೆನಪು, ದಾದಾಜಿ ತೀರಿಕೊಂಡ ಸಮಯದ್ದು. ಅಷ್ಟರಲ್ಲಾಗಲೇ ತಂದೆಯ ಇಬ್ಬರು ಸೋದರಿಯರು ಯಾವುದೋ ಕಾರಣಕ್ಕೆ ಗಂಡನ ಮನೆಯಿಂದ ಹಿಂತಿರುಗಿ ಬಂದಿದ್ದ ಸಂದರ್ಭ. ತೀವ್ರವಾದ ಆರ್ಥಿಕ ಮುಗ್ಗಟ್ಟು. ಸಾಲ ಮಾಡಿ ಹದಿಮೂರನೇ ದಿನದ ತಿಥಿಗೆ ಸಾಮಾನು ತಂದು ಇಟ್ಟಿದ್ದರು. 15 ಕೆ.ಜಿ. ತೂಕದ ಎಣ್ಣೆಯ ಡಬ್ಬ ತಂದಿದ್ದರು. ಚಚ್ಚೌಕಾರದ